ಕಳಪೆ ದರ್ಜೆಯ, ಅಗ್ಗದ ಮದ್ಯದ ಪಾರ್ಟಿಗಳು ನಡೆಯುತ್ತಿದ್ದವು. ಇವೆಲ್ಲದರ ಮಧ್ಯೆ ಹುಡುಗ ತನ್ನ ಕಲಾಕೃತಿಯನ್ನು ಧ್ಯಾನಸ್ಥ ಭಂಗಿಯಲ್ಲಿ ಕುಳಿತುಕೊಂಡು ನೋಡುತ್ತಿರುವ ದೃಶ್ಯ ಮುದುಕನ ಮನೋಪಟಲದ ಮುಂದೆ ಹಾದು ಹೋಗತೊಡಗಿತು.

ಅಡೆತಡೆಗಳಿಲ್ಲದೆ ನೆನಪುಗಳ ಬಂಡಿ ಸಾಗುತ್ತಿರುವ ಪರಿ ಮುದುಕನಿಗೆ ವಿಶೇಷವೆನಿಸಿತು. ಅದೊಂದು ದಿನ... ಮುದುಕನ ಕೈಯಲ್ಲಿ, ಲಾಟರಿ ಹೊಡೆದಂತೆ ಒಂದು ದೊಡ್ಡ ಮೊತ್ತವೇ ಸೇರಿತ್ತು. ಅವನು ದ್ರಾಕ್ಷಾಮದ್ಯದ ಒಂದು ಪೆಟ್ಟಿಗೆಯನ್ನೇ ಸ್ಟುಡಿಯೊಗೆ ಹೊತ್ತು ತಂದಿದ್ದ. ಹುಡುಗ ಕ್ಯಾನ್ವಾಸಿನ ಮುಂದೆ ಚಿತ್ರ ಬಿಡಿಸುವುದರಲ್ಲಿ ತಲ್ಲೀನನಾಗಿದ್ದ. ಮುದುಕನ ಮಡದಿ ಅವನ ರೂಪದರ್ಶಿಯಾಗಿದ್ದಳು.

ಡ್ರಿಯೋಲಿ ತುಂಬಾ ಖುಷಿಯ ಮೂಡಿನಲ್ಲಿದ್ದ. ದ್ರಾಕ್ಷಾಮದ್ಯದ ಬಾಟಲಿಗಳನ್ನು ಕೆಳಗಿಡುತ್ತಾ, "ಇವತ್ತು ನಾವು ಭರ್ಜರಿ ಪಾರ್ಟಿ ಮಾಡುವ!" ಎಂದ.

"ಯಾವ ಖುಷಿಗೋ?" ಹುಡುಗ ಗಂಟುಮೋರೆಯಲ್ಲಿ ಕೇಳಿದ. "ನಿನ್ನ ಹೆಂಡತಿಗೆ ಡೈವೊರ್ಸ್ ಕೊಟ್ಟು ನನಗೆ ಮದುವೆ ಮಾಡಿಕೊಡಲು ಯೋಚಿಸುತ್ತಿಲ್ಲ ತಾನೆ?"

"ಇಲ್ಲ ಕಣೋ ಹುಡುಗ! ನಾನಿವತ್ತು ತುಂಬಾ ದುಡಿದಿದ್ದೀನಿ!"

"ಇವತ್ತು ನನ್ನ ಗಳಿಕೆ ಶೂನ್ಯ! ಸರಿ. ಆ ಕಾರಣಕ್ಕಾದರೂ ಇವತ್ತು ಪಾರ್ಟಿ ಮಾಡೋಣ." ಹುಡುಗ ಹೇಳಿದ.

"ಅಡ್ಡಿ ಇಲ್ಲ." ಡ್ರಿಯೋಲಿ, ಮದ್ಯದ ಬಾಟಲುಗಳನ್ನು ಹೊರತೆಗೆಯುತ್ತಾ ಹೇಳಿದ. ಅವನಿಗೆ ತುಂಬಾ ಆಯಾಸವಾಗಿತ್ತು. ಬಾಟಲು ಕೈಗೆತ್ತಿಕೊಳ್ಳಲು ಅವನ ಜೀವ ತವಕಿಸುತ್ತಿತ್ತು. ಅವನ ಜೀವನದಲ್ಲಿ ಇದೇ ಮೊದಲ ಬಾರಿ ಒಂಬತ್ತು ಗಿರಾಕಿಗಳನ್ನು ಸಂಬಾಳಿಸಿದ್ದ. ಒಂಬತ್ತು ಜನರೂ ನಾವಿಕರು! ಎಷ್ಟೋ ತಿಂಗಳುಗಳ ಅನಂತರ ನೀರಿನಿಂದ ಹೊರಕ್ಕೆ ಬಂದಿದ್ದ ಅವರು ಸಂಭ್ರಮಾಚರಣೆಯಲ್ಲಿ ತೊಡಗಿದ್ದರು. ಅವರ ಭುಜಗಳ ಮೇಲೆ, ಕೈಗಳ ಮೇಲೆ, ಎದೆಯ ಮೇಲೆ 'ಟ್ಯಾಟೂ'(ಹಚ್ಚೆ)ಗಳನ್ನು ಹುಯ್ಯುತ್ತಾ ಹುಯ್ಯುತ್ತಾ ಅವನು ದಣಿದಿದ್ದ. ಹಚ್ಚೆ ಹುಯ್ಯುವ ಕೆಲಸದಲ್ಲಿ ಕಣ್ಣುಗಳ ಏಕಾಗ್ರತೆ ತುಂಬಾ ಮುಖ್ಯ. ಅವನ ಕಣ್ಣುಗಳು ಸೂಜಿಯಿಂದ ಚುಚ್ಚಿದಂತೆ ನೋಯುತ್ತಿದ್ದವು. ಆದರೂ ಹಚ್ಚೆ ಹುಯ್ಸಿಕೊಂಡ ಹುಡುಗರು ಕೊಂಚವೂ ಚೌಕಾಶಿ ಮಾಡದೆ ಅವನು ಕೇಳಿದಷ್ಟು ಹಣವನ್ನು ಕೊಟ್ಟಿದ್ದರು. ಡ್ರಿಯೋಲಿ, ತನ್ನ ಜೀವಮಾನದಲ್ಲಿ ಇಷ್ಟು ನಗದು ಹಣವನ್ನು ಕಂಡಿದ್ದು ಇದೇ ಮೊದಲು! ಎಲ್ಲಿಂದಲೋ ಒಂದು ಬಿರಡೆಗಳನ್ನು ಬಿಚ್ಚುವ ಸ್ಕ್ರೂ ಡ್ರೈವರ್ ಹುಡುಕಿ ತಂದು ಶಬ್ದ ಹೊರಡಿಸುತ್ತಾ ಬಾಟಲುಗಳನ್ನು ತೆರೆದ.

ಚಿತ್ರ ಬಿಡಿಸುತ್ತಿದ್ದ ಹುಡುಗ, "ಜೀಸ್ ಕ್ರೈಸ್ಟ್! ಈ ವಾತಾವರಣದೊಳಗೆ ನಾನು ಹೇಗೆ ತಾನೆ ಚಿತ್ರ ಬಿಡಿಸಲಿ?" ಎಂದ, ತನ್ನ ಬ್ರಶ್ ಅನ್ನು ಕೆಳಗಿಡುತ್ತಾ.

ಅವನು ಈ ವರೆಗೆ ಬಿಡಿಸಿದ್ದ ಚಿತ್ರವನ್ನು ನೋಡಲೆಂದು ಡ್ರಿಯೋಲಿಯ ಮಡದಿ ಕ್ಯಾನ್ವಾಸಿನ ಬಳಿ ಬಂದಳು. ಒಂದು ಕೈಯಲ್ಲಿ ಬಾಟಲನ್ನು ಹಿಡಿದು ಡ್ರಿಯೋಲಿಯೂ ಹೋದ.

"ಇಲ್ಲ, ಇಲ್ಲ!" ಹುಡುಗ ಸ್ಟ್ಯಾಂಡಿನ ಮೇಲಿದ್ದ ಚಿತ್ರವನ್ನು ಮರೆಮಾಚಿದನಾದರೂ ಡ್ರಿಯೋಲಿ ಅದನ್ನು ನೋಡಿದ.

"ನೀನು ಏನೇ ಹೇಳು ಮಗಾ, ನನಗೆ ನಿನ್ನ ಪೇಂಟಿಂಗ್ಸ್‌ಗಳೆಂದರೆ ತುಂಬಾ ಇಷ್ಟ." ಎಂದ.

"ನೀನು ಎಷ್ಟೇ ಹೊಗಳಿದರೂ ಈ ಚಿತ್ರಗಳು ನನ್ನ ಹೊಟ್ಟೆ ತುಂಬಿಸುತ್ತಿಲ್ಲ." ಹುಡುಗ ಹತಾಶೆಯಿಂದ ಹೇಳಿದ.

"ಮಗಾ, ನೀನು ಇಷ್ಟೊಂದು ನಿರಾಶನಾಗಬೇಡ. ಒಳ್ಳೆಯ ದಿನಗಳು ಖಂಡಿತ ಬರುತ್ತವೆ."